ಅವು ಆಪ್ತವಾಗುತ್ತವೆ. ಕೆಲವೆಡೆ ಹಸ್ತಕ್ಷೇಪ, ಭುಜಕೀರ್ತಿ ಎನ್ನುವ ಹೆಸರುಗಳು ಚಿತ್ರಿಸಲ್ಪಟ್ಟ ವ್ಯಕ್ತಿಗಳಿಗೆ ತುಸು ಭಾರವೆನಿಸುವುದುಂಟು. ಈ ಪುಸ್ತಕದ ಶೀರ್ಷಿಕೆಯಾದ 'ಡುಮಿಂಗ' ಎಂಬುದು ಕತೆಯೊಂದರ ಪಾತ್ರದ ಹೆಸರೇ ಆಗಿದೆ. ವ್ಯಕ್ತಿಯೊಬ್ಬನ ಹೆಸರಿನ ಜೊತೆ, ಹೆಸರನ್ನೂ ಮೀರಿದ ಹಲವು ಆಯಾಮಗಳಿವೆ ಎಂದು ಹೇಳುವ, ಅದರ ಸುತ್ತಲಿರುವ ಮಾನಸಿಕ ದ್ವಂದ್ವ, ಸಂಕೀರ್ಣ ಸಮಸ್ಯೆಗಳನ್ನು ಕಾಣಿಸಿಕೊಡುವ ಹಲವು ಕತೆಗಳು ನಮಗೆ ಸಿಗುತ್ತವೆ. ವಿವೇಕ ಶಾನಭಾಗರ 'ಊರು ಭಂಗ' ಕಾದಂಬರಿಯ ಒಂದು ಪಾತ್ರ, ಜಯಂತ ಕಾಯ್ಕಿಣಿಯವರ 'ನೋ ಪ್ರಸಂಟ್ ಪ್ಲೀಸ್'ನ ನಾಯಕ ಈ ಹೆಸರಿನ ಸುಳಿಯಲ್ಲಿ ಸಿಕ್ಕವರೇ. ಅದೇ ರೀತಿ, ತನ್ನ ಅಂತರಂಗದ ತಳಮಳವನ್ನು ತನ್ನ ಹೆಸರಿಗೆ ತಳಕು ಹಾಕುತ್ತ, ಆ ಹೆಸರಿನ ಮುಖೇನವೇ ಅದನ್ನು ಹೊರ ಹಾಕುವ ವಿಕ್ಷಿಪ್ತ ವ್ಯಕ್ತಿತ್ವವನ್ನು ಶಶಿ ತರೀಕೆರೆಯವರ 'ಡುಮಿಂಗ' ಕತೆಯಲ್ಲಿ ಕಾಣಬಹುದು.

ಶಶಿ ತಮ್ಮ ಕತೆಯ ನಿರೂಪಣೆಯಲ್ಲಿ ಸಾಕಷ್ಟು ಉಪಮೆಗಳನ್ನು ಬಳಸುತ್ತಾರೆ. ಈ ವಿಭಿನ್ನ ಶೈಲಿ ಓದಿನ ಓಘಕ್ಕೇನೂ ಭಂಗ ತರುವುದಿಲ್ಲ. ಕೆಲ ಹೋಲಿಕೆಗಳು ಅಪರೂಪದ್ದೆನಿಸಿದರೆ, ಕೆಲವು ಅಚ್ಚರಿ ಹುಟ್ಟಿಸುತ್ತವೆ. ಹಾಗೆಯೇ ಎಲ್ಲ ಸಂಗತಿಗಳನ್ನೂ ಅರ್ಥಾಲಂಕಾರದ ಮೂಲಕವೇ ಅರುಹಬೇಕೆಂಬ ಒತ್ತಾಯಕ್ಕೆ ಅವರು ಮಣಿಯಬೇಕೆಂದೇನೂ ಇಲ್ಲ. ಅವರ ಕಥನ ಕ್ರಮದಲ್ಲಿ ದೃಶ್ಯಕ್ಕೆ ಹೆಚ್ಚು ಒತ್ತಿದೆ. ನಮ್ಮ ಕಣ್ಣೆದುರಿಗೇ ನಡೆವ ಘಟನೆಯಲ್ಲಿ ನಾವು ಕಾಣದ್ದನ್ನು ಸೂಕ್ಷ್ಮವಾಗಿ ಓದುಗನಿಗೆ ತೋರಿಸಿಕೊಡುವುದು ಅವರ ಶೈಲಿ. 'ಮುಗಿಲ ಕರೆ' ಕತೆಯ ವೃದ್ಧಾಶ್ರಮದ ಸಾವಿನ ವರ್ಣನೆಯಲ್ಲಿ, 'ಜಾದೂಗಾರನ ನಿದ್ದೆ'ಯ ನಾಯಕನ ನಿದ್ರಾಭಂಗಿಯನ್ನು ಬಣ್ಣಿಸುವ ಕ್ರಮದಲ್ಲಿ ನಾವದನ್ನು ಕಾಣಬಹುದು. 'ರಿಮ್ಯಾಂಡ್ ಹೋಮಿನ ಉಪವನದಲ್ಲಿ ಮಗುಮ್ಮಾಗಿ ಬೆಳೆದ ತೆಂಗು ನುಗ್ಗೆ ಮರಗಳಿಗಿಂತಾ ಮಹಾ ಗೋಡೆಗಳೇ ಎತ್ತರವಾಗಿ ಕಾಣುತ್ತಿದ್ದವು. ಆ ಗೋಡೆಗಳ ಕೆಳಗೆ ಬರೀ ಒಂದು ಕಣ್ಣೆಟ್ಟು ನೋಡಬಹುದಾದ ಲೆಕ್ಕವಿಲ್ಲದಷ್ಟು ಕಿಂಡಿಗಳನ್ನು ಹುಡುಗರೇ ಕೊರೆದಿದ್ದರು' ಎನ್ನುವ 'ಜನರಲ್ ವಾರ್ಡ್' ಕತೆಯ ಸಾಲು ಶಶಿಯವರ ಸೂಕ್ಷ್ಮ ಗ್ರಹಿಕೆಗೆ ಒಂದು ನಿದರ್ಶನ.

ತಮ್ಮಿಷ್ಟದ ಹಿರಿಯ ಕತೆಗಾರರ ಶೈಲಿಯನ್ನು ಯುವ ಲೇಖಕರು ತಮ್ಮ ಆರಂಭದ ಕತೆಗಳಲ್ಲಿ ಅನುಕರಿಸುವ ಸಂಗತಿ ಕಾಣದ್ದೇನಲ್ಲ. ನಮಗರಿವಿಲ್ಲದಂತೆಯೇ ಅವರು ಬರಹಗಳಲ್ಲಿ ನುಸುಳಿಬಿಡಲೂಬಹುದು. ಆ ಛಾಯೆ ಶಶಿಯವರ ಕತೆಗಳಲ್ಲಿ ಅಲ್ಲಲ್ಲಿ ಕಾಣುತ್ತದೆ. ಇದನ್ನು ಮೀರುವ ಪ್ರಯತ್ನವನ್ನು ಮುಂದಿನ ಕಥೆಗಳಲ್ಲಿ ಖಂಡಿತ ಮಾಡಬಲ್ಲರು ಎನ್ನುವ ಕುರುಹನ್ನು ಕೂಡಾ ಅವರು ಇಲ್ಲೇ ನೀಡಿದ್ದಾರೆ. ಎಲ್ಲವಕ್ಕೂ ಮಿಗಿಲಾಗಿ, ಮಗುವಿನ ಒಣ ತುಟಿಯ ಮೇಲೆ ಬಳೆಯಚೂರಲ್ಲಿ ಗೆರೆ ಎಳೆದಂತ ಬಿರುಕನ್ನು ಕಾಣಬಲ್ಲ ನೋಟ ಅವರಿಗಿದೆ. ಹೋಟೆಲಿನಲ್ಲಿ ಟೇಬಲ್ಲು ಸಾಫು ಮಾಡುವ ಮೊಂಡಾದ ಮೂಗಿನ ಪೋರನನ್ನು ಕಂಡು ಅನ್ಯಮನಸ್ಕನಾಗಿ ತಿಂಡಿ ತಿನ್ನದೇ ಹೊರಗೆ ಬರುವ ಮನಸ್ಸು ಅವರಲ್ಲಿದೆ. ನೆಲದ ಮೇಲೆ ಬಿದ್ದ ಅಕ್ಕಿ ಕಾಳುಗಳನ್ನು ಅರಿಯದೇ ತುಳಿದಾಗ ಮನದಲ್ಲಿ ತಪ್ಪಿತಸ್ಥ ಭಾವದ ಕಸಿವಿಸಿಯಿದೆ. ಇಂಥ ನೂರಾರು ಸಂವೇದನೆಗಳ ತಳಹದಿಯ ಮೇಲೆ ಹೆಣೆದ 'ಡುಮಿಂಗ'ದ ಕತೆಗಳು ನಮಗೂ ಆಪ್ತವೆನಿಸುತ್ತವೆ; ಆರ್ದ್ರವೆನಿಸುತ್ತವೆ.

**ಕರ್ಕಿ ಕೃಷ್ಣಮೂರ್ತಿ:** ವೃತ್ತಿಯಲ್ಲಿ ಸಿವಿಲ್ ಎಂಜಿನಿಯರ್. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕರ್ಕಿ ಅವರ ಊರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸ. ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಸೀನಿಯರ್ ಜನರಲ್ ಮ್ಯಾನೇಜರ್. 'ಮಳೆ ಮಾರುವ ಹುಡುಗ' ಮತ್ತು 'ಗಾಳಿಗೆ ಮೆತ್ತಿದ ಬಣ್ಣ' ಅವರ ಕಥಾಸಂಗ್ರಹಗಳು.